ಕರ್ನಾಟಕ ವಿಧಾನ ಸಭೆ

ಬುಧವಾರ 31 ನೇ ಮಾರ್ಚ್ 1993
ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 11-15 ಗಂಟೆಗೆ ಸಮಾವೇಶಗೊಂಡಿತು.
ಅಧ್ಯಕ್ಷರು : (ಶ್ರೀ ವಿ.ಎಸ್.ಕೌಜಲಗಿ) ಅವರು ಪೀಠವನ್ನು ಅಲಂಕರಿಸಿದ್ದರು.

ಸದನ ನಡೆಯುವಾಗ ಮಂತ್ರಿಗಳು ಇಲ್ಲದೆ ಇರುವ ಬಗ್ಗೆ ಚರ್ಚೆ

ಶ್ರೀ ಪಿ.ಜಿ. ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೇ, 42 ಜನ ಮಂತ್ರಿಗಳು, ಇದ್ದರೂ ಸಹ ಸದನಕ್ಕೆ ಒಬ್ಬ ಮಂತ್ರಿಗಳೂ ಬಂದಿಲ್ಲ. ದಯವಿಟ್ಟು ಸದನವನ್ನು ಮುಂದಕ್ಕೆ ಹಾಕಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:-ತಲೆ ತಗ್ಗಿಸುವಂಥ ಸಂದರ್ಭವಾಗಿದೆ. ಕ್ಯಾಬಿನೆಟ್ ಸಚಿವರು ಒಬ್ಬರೂ ಇಲ್ಲವೆಂದರೆ ಹೇಗೆ? ಇದು ಅವಮಾನ. ಇದರ ಬಗ್ಗೆ ರೂಲಿಂಗ್ ಕೊಡಬೇಕು. ಸದನವನ್ನು ಮುಂದಕ್ಕೆ ಹಾಕಿ.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ:-ನಿನ್ನೆ ದಿವಸ ಅಪ್ರೋಪ್ರಿಯೇಷನ್ ಬಿಲ್ ಪಾಸ್ ಮಾಡಿಕೊಟ್ಟಿದ್ದೇನೆ. ಇವತ್ತು ಒಬ್ಬರೂ ಸಚಿವರು ಸದನಕ್ಕೆ ಬಂದಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :- ಇಷ್ಟೊಂದು ಸಚಿವರಿರುವಾಗ ಒಬ್ಬ ಮಂತ್ರಿಗಳೂ ಇಲ್ಲವೆಂದರೆ ಹೇಗೆ? ದಯವಿಟ್ಟು ಸಭೆಯನ್ನು ಮುಂದಕ್ಕೆ ಹಾಕಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಜವಾಬ್ದಾರಿ ಇರತಕ್ಕಂಥವರು ಒಬ್ಬರೂ ಇಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ಮುಖ್ಯ ಮಂತ್ರಿಗಳಿಲ್ಲ. ಉಪ ಮುಖ್ಯಮಂತ್ರಿಗಳಿಲ್ಲ. ಸರ್ಕಾರದಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ ಇವತ್ತು ಪತ್ರಿಕೆಗಳಲ್ಲಿ ಬಂದಿದೆ. ಒಬ್ಬರೂ ಮಂತ್ರಿಗಳೂ ಸದನದಲ್ಲಿ ಇಲ್ಲವೆಂದರೆ ಹೇಗೆ?

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ:-ಅಧ್ಯಕ್ಷರೇ ನೀವು ಅವರಿಗೆ ಛೀಮಾರಿ ಹಾಕಬೇಕು.

ಶ್ರೀ ವಾಟಾಳ್ ನಾಗರಾಜ್ :- ಸದನವನ್ನು ಬೇಜವಾಬ್ದಾರಿಯಿಂದ ನೋಡುತ್ತಿದ್ದಾರೆ. ಸದನಕ್ಕೆ ಗೌರವವನ್ನು ತೋರಿಸುತ್ತಿಲ್ಲ. ಇದರ ವಿರುದ್ಧ ನಾವು ಧರಣಿ ಮಾಡುತ್ತೇವೆ.

ಶ್ರೀ ಆರ್. ವಿ. ದೇಶಪಾಂಡೆ:- ಅಪ್ರೊಪ್ರಿಯೇಷನ್ ಬಿಲ್ ಪಾಸ್ ಆದ ಮಾರನೆ ದಿನವೇ ಯಾವ ಮಂತ್ರಿಗಳೂ ಕಾಣಿಸುತ್ತಿಲ್ಲ. ಇದು ಸದನಕ್ಕೆ ಅವಮಾನವಾಗಿದೆ. ಸದನಕ್ಕೆ ಅವಮಾನವಾದರೆ ಅದು ನಿಮಗೆ

ಅವಮಾನವಾದ ಹಾಗೆ. ತಾವು ದಯಮಾಡಿ ಸಭೆಯನ್ನು ಮುಂದಕ್ಕೆ ಹಾಕಿ.

(ಗೊಂದಲ)

(ಬಿಜೆಪಿ) ಪಕ್ಷದ ಸದಸ್ಯರಾದ ಶ್ರೀ ಕೆ ಎಸ್ ಈಶ್ವರಪ್ಪನವರು ಸದನದ ವೆಲ್ ಒಳಗೆ ಬಂದು ನಿಂತು ಕೂಗತೊಡಗಿದರು)

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಸಭೆಯನ್ನು ಮುಂದಕ್ಕೆ ಹಾಕಿ. ಈ ರೀತಿ ಮಾಡಿದರೆ ಸದನಕ್ಕೆ ಗೌರವವನ್ನು ತರುವುದಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ಅರ್ಧ ಗಂಟೆ ಅಧಿವೇಶನವನ್ನು ಮುಂದಕ್ಕೆ ಹಾಕಿ.

ಶ್ರೀ ವಾಟಾಳ್ ನಾಗರಾಜ್:- ಸದನನನ್ನು ಮುಂದಕ್ಕೆ ಹಾಕಿ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಮುಖ್ಯ ಮಂತ್ರಿಗಳು ಸಭೆಗೆ ಬಂದು ಕ್ಷಮಾಪಣೆ ಕೇಳಬೇಕು.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ:- ಈ ರೀತಿಯಿಂದ ಸದನಕ್ಕೆ ಅಗೌರವ ಮಾಡಿರುವುದು ಇವತ್ತು ಸದನದ ಇತಿಹಾಸದಲ್ಲಿಯೇ ಮೊದಲನೆಯ ಬಾರಿ; ಮುಂದುಗಡೆ ಒಬ್ಬರೂ ಮಂತ್ರಿಗಳು ಇಲ್ಲ. ಮುಖ್ಯ ಮಂತ್ರಿಗಳೂ ಇಲ್ಲ. 40 ಜನ ಮಂತ್ರಿಗಳನ್ನು ಮಾಡಿ, ಒಬ್ಬರೂ ಕ್ಯಾಬಿನೆಟ್ ಮಂತ್ರಿ ಇಲ್ಲ. ನಾನು ತಮ್ಮಲ್ಲಿ ಬಹಳ ವಿನಯದಿಂದ ಹೇಳುತ್ತಿದ್ದೇನೆ. ನಾವು ಅಪ್ರೊಪ್ರಿಯೇಷನ್ ಬಿಲ್ ಪಾಸ್ ಮಾಡಿಕೊಂಡಿದ್ದೇವೆ. ಆದ್ದರಿಂದ ನಮಗೆ ಚಿಂತೆ ಇಲ್ಲ ಅಂತ ತಿಳಿದುಕೊಂಡಿದ್ದೀರಾ? ಇವರಿಗೆ ಛೀಮಾರಿ ಹಾಕಬೇಕು. ತಾವು ಸದನವನ್ನು ಮುಂದಕ್ಕೆ ಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:-ಈ ಸರ್ಕಾರಕ್ಕೆ ಛೀಮಾರಿ ಹಾಕಿ. ಈ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳಿ. ಈ ಸರ್ಕಾರ ನಿಜವಾಗಿಯೂ ಈ ಸದನಕ್ಕೆ ಅಗೌರವಮಾಡಿದೆ. ಈ ಸದನದ ಘನತೆಯನ್ನು ಎತ್ತಿಹಿಡಿದು ಈ ಸದನವನ್ನು ಎತ್ತರಕ್ಕೆ ತೆಗೆದುಕೊಂಡು ಹೋಗಿ ದಯಮಾಡಿ ಆ ಸದನವನ್ನು ಮುಂದಕ್ಕೆ ಹಾಕಿ.

ಶ್ರೀ ಆರ್. ವಿ. ದೇಶಪಾಂಡೆ:- ಈಗ ಸಭೆಯನ್ನು ಅಡ್ಜನ್ ಮಾಡಿ.

(ಗೊಂದಲ)

ಅಧ್ಯಕ್ಷರು: ಮಂತ್ರಿಗಳು ಏನು ಹೇಳುತ್ತಾರೆ ಕೇಳೋಣ.

(ಗೊಂದಲ)

ಡಾ: ಆರ್.ಬಿ. ಚೌಧರಿ:- ಮಾನ್ಯ ಮುಖ್ಯಮಂತ್ರಿಗಳು ಕೌನ್ಸಿಲ್‌ನಲ್ಲಿದ್ದಾರೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ಮುಖ್ಯಮಂತ್ರಿಯನ್ನು ಕರೆಯಿಸಬೇಕು. ಮುಖ್ಯಮಂತ್ರಿಗಳು ಬಂದು ಇಲ್ಲಿ ಕ್ಷಮಾಪಣೆಯನ್ನು ಕೇಳಬೇಕು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :- ಈ ಸದನದ ಗೌರವವನ್ನು ಎತ್ತಿ ಹಿಡಿಯಬೇಕು. ಮಾನ್ಯ ಮುಖ್ಯಮಂತ್ರಿಗಳು ಬರುವರೆಗೂ ನಾವು ಧರಣಿ ಮಾಡುತ್ತೇವೆ. ಈ ಸಭೆಗೆ ಈ ರೀತಿ ಮಾಡಿರತಕ್ಕಂಥ ಮಹಾಪಾಪ, ಈ ಸದನಕ್ಕೆ ಮಾಡಿರತಕ್ಕದ್ದು ಅಕ್ರಮ ಸರ್ಕಾರದ ವಿರುದ್ಧ ನಾವು ಅನೇಕ ವಿಚಾರಗಳನ್ನು ಹೇಳಬೇಕಾಗಿದೆ. ಅನೇಕ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಒಬ್ಬ ಮಂತ್ರಿಗಳೂ ಇಲ್ಲಿ ಇಲ್ಲ.

(ಗೊಂದಲ)

ಅಧ್ಯಕ್ಷರು :- ಕುಳಿತುಕೊಳ್ಳಿ ನಾನು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :- ಜಿಲ್ಲಾಪರಿತ್ತಿನ ಮಸೂದೆಯನ್ನು ಇವತ್ತು ಮಂಡಿಸಬೇಕಾಗಿದೆ. ಅಂತಹ ಪ್ರಮುಖವಾದಂತಹ ಮಸೂದೆಯನ್ನು ಮಂಡಿಸತಕ್ಕಂಥ ವಿಚಾರ ಇದೆ. ಕ್ರಾಂತಿಕಾರವಾಗಿ ಚರ್ಚೆಯನ್ನು ನಡೆಸಬೇಕಾಗಿದೆ. ಇಂತಹ ಸಂದರ್ಭದಲ್ಲಿ ಮಸೂದೆಯನ್ನು ಮಂಡಿಸತಕ್ಕಂಥ ಸಚಿವರು ಇಲ್ಲ; ಈವತ್ತು ಸರ್ಕಾರ ಇಲ್ಲ;

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ:- ಮೇಜರ್ ಆಪರೇಷನ್ ಎಂದು ಹೇಳುತ್ತಾರೆ, ಇದು ಮೇಜರ್ ಆಪರೇಷನ್.....

(ಗೊಂದಲ)

ಶ್ರೀ ಪಿ.ಜಿ.ಆರ್ ಸಿಂಧ್ಯ:- ತಾವು ಅನೇಕ ಸಾರಿ ಆ ಸರ್ಕಾರವನ್ನು ಈ ಸದನದ ಸಂದರ್ಭದಲ್ಲಿ ಭೀಮಾರಿಯನ್ನು ಹಾಕಿದ್ದೀರಿ, ಮಂತ್ರಿಗಳು ಬರಬೇಕೆಂದು ಹೇಳಿದ್ದೀರಿ; ನಿನ್ನೆ ದಿವಸ ಇವರು ನಮಗೆ ಕಾಡಿ ಬೇಡಿದ ಮೇಲೆ ಸಾಯಂಕಾಲ 6.30 ರವರೆಗೂ ಕುಳಿತುಕೊಂಡು ನಾವು ಅಪ್ರೊಪ್ರಿಯೇಷನ್ ಬಿಲ್‌ನ್ನು ಸಪ್ಲಿಮೆಂಟರಿ ಡಿಮ್ಯಾಂಡ್ಸ್ ಅನ್ನು ಬಜೆಟನ್ನು ಪಾಸ್ ಮಾಡಿಸಿ ಕೊಟ್ಟಿದ್ದೇವೆ. ಯಾವ ಕಾರಣದಿಂದ ಮಾಡಿಕೊಟ್ಟೆವು. ಅಂದರೆ ಇವತ್ತು 31ನೇ ತಾರೀಖು, ನಾಳೆ ದಿವಸ ಏಪ್ರಿಲ್ 1 ಇವರಿಗೆ ತೊಂದರೆ ಆಗಬಾರದು. ಸರ್ಕಾರದ ಅಭಿವೃದ್ಧಿಯ ಕೆಲಸಗಳು ನಿಲ್ಲಬಾರದು ಎನ್ನುವ ಒಂದೇ ಕಾರಣದಿಂದ ಈ ರಾಜ್ಯದ ಇತಿಹಾಸದಲ್ಲಿ 48 ಡಿಮ್ಯಾಂಡ್ ಅನ್ನು ಒಂದೇ ಸಾರಿ ಡಿಸ್ಕಸ್ ಮಾಡಿ ಪಾಸ್ ಮಾಡಿರುವಂತಹ ಒಂದು ರೆಕಾರ್ಡ್ ಸೃಷ್ಟಿಯಾದರೂ ಸಹಿತ ನಾವು ಮಾಡಿದ್ದೇವೆ. ಇವತ್ತಿನ ಕಾರ್ಯ ಕಲಾಪಗಳ ಪಟ್ಟಿಯನ್ನು ತೆಗೆದುಕೊಳ್ಳಬೇಕೆಂದು ಹೇಳಿದಾಗ, ಗಮನ ಸೆಳೆಯುವ ಸೂಚನೆಗೆ ಸಂಬಂಧಪಟ್ಟ ಮಂತ್ರಿಗಳು ಯಾರೂ ಬಂದಿಲ್ಲ, ಮಾನ್ಯ ಡಾ|| ಚೌಧರಿಯೊಬ್ಬರು ಬಿಟ್ಟರೆ ಬೇರೆ ಯಾರೂ ಸಹಿತ ಬಂದಿಲ್ಲ. ಇವತ್ತು ಪ್ರಶ್ನೆ ಇರತಕ್ಕಂಥದ್ದು ಇದು ಇಡೀ ರಾಜ್ಯದ ಜನತೆಗೆ ಮತ್ತು ತಮಗೆ ಇವರು ಮಾಡುತ್ತಿರತಕ್ಕಂಥ ಅಪಮಾನ, ಇದನ್ನು ನಾವು ವಿರೋಧ ಮಾಡಿ ಬಹಿಷ್ಕಾರ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಮಾನ್ಯ ಪಿ.ಜಿ.ಆರ್. ಸಿಂಧ್ಯರವರು ವಿರೋಧ ಮಾಡಿ ಬಹಿಷ್ಕಾರ ಮಾಡಿ ಹೊರಗೆ ಹೋದರು).

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :- ಇದು ಅಸಾಧಾರಣ ಪರಿಸ್ಥಿತಿ ಇವತ್ತು ಆಗಿದೆ. ಇಂತಹ ಪರಿಸ್ಥಿತಿ ಎಂದೂ ಉದ್ಭವವಾಗಿರಲಿಲ್ಲ. ಇದು ಸರ್ಕಾರ ತೆಗೆದುಕೊಂಡಿರತಕ್ಕಂಥ ಬೇಜವಾಬ್ದಾರಿತನ. ಸರ್ಕಾರ ಈ ಸದನಕ್ಕೆ

ಮಾಡಿರತಕ್ಕಂಥ ಅಗೌರವ. ಸರ್ಕಾರ ಎಲ್ಲಿ ಹೋಗಿದೆ? ಸರ್ಕಾರದ ಪರವಾಗಿ ನಾವು ನಿಜವಾಗಿಯೂ ತಮಗೆ ಹೇಳುವುದಾದರೆ 48 ಬೇಡಿಕೆಗಳನ್ನು ಚರ್ಚೆ ಮಾಡದೆ ಪಾಸ್ ಮಾಡಿಕೊಟ್ಟಿದ್ದೇವೆ.

(ಗೊಂದಲ)

ಶ್ರೀ ಕೆ. ಎಸ್.ಈಶ್ವರಪ್ಪ:-ರಾಜೀನಾಮೆಯನ್ನು ಕೊಟ್ಟು ಹೋಗಲಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ತಾವು ನಮ್ಮ ರಕ್ಷಣೆಗೆ ಬರಬೇಕು.

(ಗೊಂದಲ)

ಡಾ : ಹೆಗಪ್ಪ ಡಿ. ಲಮಾಣಿ:- ಅಜಂಡಾ ಪ್ರಕಾರ ಏನು ಇದೆ ಅದರಂತೆ ತಾವು ಪ್ರಾರಂಭಮಾಡಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ಈ ಬಿಲ್ ಪಾಸಾದ ಮೇಲೆ ಪರಸ್ಪರ ಅವರು ಕಚ್ಚಾಟದಲ್ಲಿ ತೊಡಗಿದ್ದಾರೋ ಅಥವಾ ಮಾನ್ಯ ಮುಖ್ಯಮಂತ್ರಿಗಳು ರಾಜೀನಾಮೆಯನ್ನು ಕೊಡುವುದಕ್ಕೆ ಹೊರಟಿದ್ದಾರೋ ಈ ರಾಜ್ಯದಲ್ಲಿ ಏನು ನಡೆಯುತ್ತಿದೆ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ಅಜೀರ್ಣವಾಗುವಷ್ಟು ಬಹುಮತವನ್ನು ಕೊಟ್ಟು ಸರ್ಕಾರದ ನಡವಳಿಕೆ ಏನು ಎಂದು ಈ ನಾಡಿನ ಜನರಿಗೆ ಇವತ್ತು ಬೆತ್ತಲೆಯ ಪ್ರದರ್ಶನವನ್ನು ಮಾಡಿದ್ದಾರೆ.

ಅಧ್ಯಕ್ಷರು:- ನಾನು ಪದೇ ಪದೇ ಸರ್ಕಾರಕ್ಕೆ ಹೇಳಿಕೊಳ್ಳುತ್ತಾ ಬಂದಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಹಾಜರಿರಬೇಕೆಂದು ನಾನು ಪುನಃ ಹೇಳುತ್ತೇನೆ. ತಾವು ಅದರ ಬಗ್ಗೆ ಸಾಕಷ್ಟು ಹೇಳಿದ್ದೀರಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ:- ಕ್ರಮ ತೆಗೆದುಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು:-ಮುಂದಿನ ಕಾರ್ಯಕಲಾಪವನ್ನು ಶುರು ಮಾಡೋಣ. ನಾನು ಪುನಃ ಅವರಿಗೆ ವಾರ್ನಿಂಗ್ ಕೊಡುತ್ತೇವೆ.

ಶ್ರೀವಾಟಾಳ್ ನಾಗರಾಜ್:- ಮಾನ್ಯ ಮುಖ್ಯಮಂತ್ರಿಗಳು ಬರುವವರೆಗೂ ನಾವು ಧರಣಿ ಮಾಡುತ್ತೇವೆ.

ಅಧ್ಯಕ್ಷರು:- ಮಾನ್ಯವಾಟಾಳ್ ನಾಗಾರಾಜ್‌ರವರೇ, ಅವರನ್ನು ಕರೆಯಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ತಮ್ಮ ಬಗ್ಗೆ ನಮಗೆ ಬಹಳ ಗೌರವ ಇದೆ. ನಿಮಗೆ ನಾವು ಅತ್ಯಂತ ಗೌರವವನ್ನು ಕೊಡುತ್ತಿದ್ದೇವೆ. ಮುಖ್ಯ ಮಂತ್ರಿಗಳು ಹಾಗೂ ಕೆಲವು ಸಚಿವರುಗಳು ಸಭೆಗೆ ಬರಬೇಕಾಗಿದೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ಸದನವನ್ನು ಕಾಲು ಗಂಟೆ ಮುಂದೂಡಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ಈ ರೀತಿ ಮಾಡುವುದು ಅಕ್ಷಮ್ಯ ಅಪರಾಧ. ಪ್ರಜಾತಂತ್ರ ವ್ಯವಸ್ಥೆಯ ಬಗ್ಗೆ...ರಾಜ್ಯದ ಜನತೆಗೆ ಮೋಸಮಾಡಿ ಸರ್ಕಾರವನ್ನು ನಡೆಸುತ್ತಿದ್ದಾರೆ.

(ಗೊಂದಲ)

ಶ್ರೀ ಕೆ. ಹರ್ಷಕುಮಾರ್‌ಗೌಡ:- ಸಣ್ಣ ಸಣ್ಣ ವಿಷಯಕ್ಕೂ ಈ ರೀತಿ ಮಾಡಿದರೆ ಹೇಗೆ?

ಶ್ರೀ ಕೆ.ಎಸ್. ಈಶ್ವರಪ್ಪ:- ಸಣ್ಣ ಸಣ್ಣ ವಿಚಾರ ಅನ್ನುತ್ತಾರೆ. ಇವರಿಗೆ ನಾಚಿಕೆಯಾಗುವುದಿಲ್ಲವೆ?

(ಗೊಂದಲ)

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗಾರಾಜ್‌ರವರು ಮತ್ತು ಮಾನ್ಯ ಕೆ.ಎಸ್.ಈಶ್ವರಪ್ಪನವರು ಸದನದ ಭಾವಿಗೆ ಬಂದು ಮಾತನಾಡತೊಡಗಿದರು)

ಅಧ್ಯಕ್ಷರು:- ಈಗ ಸಂತಾಪ ಸೂಚನೆ ಇದೆ. ಈ ಕಡೆಗೆ ಬನ್ನಿ. ಮಾನ್ಯ ವಾಟಾಳ್ ನಾಗರಾಜ್‌ರವರೇ, ತಾವು ತಮ್ಮ ಸ್ಥಳಕ್ಕೆ ಬರಬೇಕು. ಸಂತಾಪ ಸೂಚನೆ ಇದೆ. ಕಾರ್ಯಕಲಾಪವನ್ನು ಶುರು ಮಾಡೋಣ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಸಭೆಯನ್ನು ಅರ್ಧ ಗಂಟೆ ಮುಂದೂಡಿ.

(ಗೊಂದಲ)

ಅಧ್ಯಕ್ಷರು :- ಮಾನ್ಯ ಮುಖ್ಯಮಂತ್ರಿಗಳು ಬರುತ್ತಿದ್ದಾರೆ, ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ:- ಸಭೆಯನ್ನು ಅರ್ಧ ಗಂಟೆ ಮುಂದಕ್ಕೆ ಹಾಕಿ ಎಂದು ಕೈಮುಗಿದುಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಹರ್ಷ ಕುಮಾರ್‌ಗೌಡ:- ಮಾನ್ಯ ವಾಟಾಳ್ ನಾಗರಾಜ್‌ರವರು ಹಗಲೊತ್ತೇ ಭಾವಿಯೊಳಗೆ ಬೀಳುವುದಕ್ಕೆ ಹೋಗುತ್ತಿದ್ದಾರೆ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:- ಇದು ಗೌರವ ಅಲ್ಲ, ಸದನವನ್ನು ಅರ್ಧ ಗಂಟೆ ಮುಂದೂಡಿ.

(ಗೊಂದಲ)

ಶ್ರೀ ಕರಿಯಣ್ಣ:-ಮಾನ್ಯ ಅಧ್ಯಕ್ಷರೇ, ಈಗ ತಾವು ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಟ್ಟಿದ್ದೀರಿ. ಮುಖ್ಯ ಮಂತ್ರಿಗಳನ್ನು ಕರೆಸುತ್ತೇವೆಂದು ಹೇಳಿದ್ದೀರಿ. ಹಾಗೂ ಮಂತ್ರಿಗಳೂ ಸಹಿತ ದಯಮಾಡಿಸಿದ್ದಾರೆ. ತಾವು ಇಷ್ಟು ರಿಕ್ವೆಷ್ಟ್ ಮಾಡಿಕೊಂಡರೂ ಸಹಿತ ವಿರೋಧಪಕ್ಷದ ನಾಯಕರು ತಮ್ಮ ರಿಕ್ವೆಸ್ಟ್ ಅನ್ನೂ ಉಲ್ಲಂಘಿಸಿ ಹೋಗಿರತಕ್ಕಂತದ್ದು ನಿಜವಾಗಲೂ ಇದು ಸದನಕ್ಕೆ ಅಗೌರವ ಮತ್ತು ಈ ಸದನದಲ್ಲಿ ಅವರು ಟೈಮ್ಸ್ ಅನ್ನು ವೇಸ್ಟ್ ಮಾಡುವುದಕ್ಕಾಗಿ ಈ ರೀತಿ ಮಾಡುತ್ತಿದ್ದಾರೆ ಎಂದು ಹೇಳಬೇಕಾಗಿದೆ. ತಾವು ರಿಕ್ವೆಸ್ಟ್ ಮಾಡಿಕೊಂಡಿದ್ದೀರಿ ಮತ್ತು ಕರೆಯಿಸುತ್ತೇವೆಂದು ಹೇಳಿದ್ದೀರಿ; ಆದರೂ ಅವರು ಗೌರವ ಕೊಡಲಿಲ್ಲ. ನಿಜವಾಗಿಯೂ ಇದು ಸದನಕ್ಕೆ ಮಾಡಿದ ಅಗೌರವ ಎಂದು ನನ್ನ ಅಭಿಪ್ರಾಯ.

ಶ್ರೀ ವೈ.ಕೆ. ರಾಮಯ್ಯ:- ಇದು ಅನೂಚಾನವಾಗಿ ನಡೆದುಕೊಂಡಿರುವ ಪದ್ಧತಿ. ನನಗೆ ಆಶ್ಚರ್ಯವಾಗುತ್ತಿದೆ. ಬಹುಶಃ ಆ ಕಡೆ ಕುಳಿತಿರತಕ್ಕ ಸದಸ್ಯರಿಗೂ ಆ ಮನೋಭಾವವಿದೆ. ಸರ್ಕಾರದಲ್ಲಿ ಯಾರಾದರೊಬ್ಬರು ಮಂತ್ರಿಗಳು ಕುಳಿತಿದ್ದರೂ ಸಾಕು ಸರ್ಕಾರ ಇದೆ ಎಂದು ಕಾನೂನು ಪ್ರಕಾರ ನಾವು ಭಾವಿಸಿಕೊಳ್ಳಬೇಕಾಗುತ್ತದೆ.

ಅದರ ಬಗ್ಗೆ ನನ್ನ ತಕರಾರು ಇಲ್ಲ. ಆದರೆ ಅಧ್ಯಕ್ಷರೇ, ನನಗೆ ಅರ್ಥವಾಗದೇ ಇರುವುದು ಏನೆಂದರೆ, ಸದನ ಕರೆಯದೇ ಇದ್ದಾಗ ಸದನ ಕರೆಯಪುದಿಲ್ಲವೆಂದ ಮೇಲೆ ನಾವು ಒತ್ತಡ ತರುತ್ತೇವೆ. ಸದನ ಇಷ್ಟೇ ದಿವಸ ನಡೆಯಬೇಕು. 100 ದಿವಸ ನಡೆಯಬೇಕು ಎನ್ನುವ ರೀತಿ ನಿಯಮಗಳನ್ನು ನಾವು ರೂಪಿಸಿಕೊಳ್ಳುತ್ತೇವೆ. ಅದಕ್ಕಿಂತಲೂ ನನಗೆ ಅರ್ಥವಾಗದೇ ಇರುವ ವಿಷಯ ಯಾವು ಕಾನೂನನ್ನು ಮಾಡಲಿಕ್ಕಾಗಿ ಜನ ನಮ್ಮನ್ನು ಆರಿಸಿ ಕಳುಹಿಸಿದ್ದಾರೋ, ಅದಕ್ಕಿಂತ ಪ್ರಮುಖವಾದಂಥ ಕೆಲಸ ಜನಪ್ರತಿನಿಧಿಗಳಿಗೆ ಮತ್ತೊಂದು ಯಾವುದು ಇದೆ ಸ್ವಾಮಿ? ನಾನು ಅವರನ್ನು ದೋಷಾರೋಷಣೆ ಮಾಡುತ್ತಿಲ್ಲ. ನಾವು ಎಲ್ಲಿ ತಪ್ಪಿದ್ದೇವೆ? ಲಕ್ಷಾಂತರ ಜನಗಳ ಪ್ರತಿನಿಧಿಯಾಗಿ ಮಾಡಬಾರದ್ದು ಮಾಡಿ ನಾನು ಆರಿಸಿ ಬಂದಿದ್ದೇನೆ. ಹೇಳಬಾರದ್ದು ಹೇಳಿ ಆರಿಸಿ ಬಂದಿದ್ದೇವೆ. ನಿಮ್ಮನ್ನು ಸ್ವರ್ಗಕ್ಕೆ ತಗೆದುಕೊಂಡು ಹೋಗುತ್ತೇನೆಂದು ಹೇಳಿ ಬಂದಿದ್ದೇನೆ. ನಿಮ್ಮನ್ನು ರಕ್ಷಣೆ ಮಾಡುವಂಥ ಕಾನೂನು ಮಾಡುತ್ತೇವೆಂದು ಹೇಳಿ ಬಂದಿದ್ದೇವೆ. ಇಲ್ಲಿ ಕುಳಿತುಕೊಂಡು ಏನು ನಡೆಯುತ್ತದೆ ಎನ್ನುವ ವ್ಯವಧಾನ, ಆಸಕ್ತಿ ಇಲ್ಲದೆ ಹೋದರೆ ಇದಕ್ಕೆ ಏನೆಂದು ಕರೆಯಬೇಕು. ಇದಕ್ಕಿಂತ ಮುಖ್ಯವಾಗಿ ಅಧ್ಯಕ್ಷರೇ, ಇದಕ್ಕೆ ತಾವು ಏನಾದರೊಂದು ಇತಿಶ್ರೀ ಹೇಳಬೇಕು. ನಾವು ಇಲ್ಲಿ ಕೇಳಿಕೊಂಡಿದ್ದೇವೆ ಮಂತ್ರಿಗಳು ಬರಬೇಕು: ತಾವು ಒಂದು ಸಾರಿ ಅಲ್ಲ ನಾಲ್ಕಾರು ಸಾರಿ ಸರ್ಕಾರಕ್ಕೆ ಎಚ್ಚರಿಕೆ ಕೊಟ್ಟಿದ್ದೀರಿ.

ನಮ್ಮ ಮಾತು ಕೇಳುವುದು ಬೇಡ; ನಾವು ಪ್ರಚಾರಕ್ಕಾಗಿ ಕೂಗಿಕೊಳ್ಳುತ್ತೇವೆ. ನಿಮ್ಮ ಮಾತು ಕೇಳದೆ ಹೋದರೆ ಏನು ಮಾಡೋಣ? ಈಗ ಅಧ್ಯಕ್ಷರು ನಿಂತು ಕೊಂಡಾಗ ನಾವು ನಿಂತುಕೊಳ್ಳಬಾರದು. ನಾವು ಕುಳಿತುಕೊಳ್ಳುತ್ತೇವೆ. ತಾವು ಅಪ್ಪಣೆ ಕೊಟ್ಟಿದ್ದೀರಿ. ಕರೆದು ಹೇಳಿದ್ದೀರಿ ಅದೂ ಅಲ್ಲದೆ ನಾವೂ ಹೇಳಿದ್ದೇವೆ. ನಮಗೆ ಗೊತ್ತು ನಾವು ಕಿರಿಚಾಡುವುದು. ಮುಷ್ಕರ ಮಾಡುವುದು. ಆಚೆಗೆ ಹೋಗುವುದು, ಇದರಿಂದ ಏನೂ ಸಾರ್ಥಕವಾಗುವುದಿಲ್ಲ. ನೀವು ಎಷ್ಟು ಭಾರಿ ಎಚ್ಚರಿಕೆ ಕೊಟ್ಟರೂ ಪ್ರಯೋಜನವಾಗಿಲ್ಲ. ಈಗ ಮುಂದಿನ ದಾರಿ ಏನು ಎನ್ನುವುದನ್ನು ಹೇಳಬೇಕು. ಇಷ್ಟು ಜನ ವಿರೋಧ ಪಕ್ಷದ ಸದಸ್ಯರನ್ನು ಹೊರಗೆ ಇಟ್ಟು ಕಾರ್ಯಕಲಾಪ ನಡೆಸುವಂಥದ್ದು ಯಾರಿಗೂ ಮರ್ಯಾದೆ ತರುವಂಥ ವಿಷಯವಲ್ಲ, ಇಲ್ಲಿ ಸಂಖ್ಯೆ ಪ್ರಶ್ನೆಯಲ್ಲ, ಸಂಖ್ಯೆ ಪ್ರಶ್ನೆ ಬಂದಾಗ ಹೇಳಿ ದಯವಿಟ್ಟುತಾವು 10 ನಿಮಿಷ ಅಡ್ಜನ್ ಮಾಡಿ ಅವರನ್ನು ಕರೆಯಿರಿ; ನಂತರ ಚರ್ಚೆ ಮಾಡಿ ಸದನ ಮುಂದುವರೆಸಿ.

(ಮಾನ್ಯ ಸದಸ್ಯರಾದ ಶ್ರೀ ವೈ.ಕೆ. ರಾಮಯ್ಯನವರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಕರಿಯಣ್ಣ:- ವಿರೋಧ ಪಕ್ಷದ ಸದಸ್ಯರು ತಾವು ರಿಕ್ವೆಸ್ಟ್ ಮಾಡಿಕೊಂಡರೂ ಸಹಿತ ಹೊರಗೆ ಹೋಗಿದ್ದಾರೆ. ಮಂತ್ರಿಗಳು ಸಾಕಷ್ಟು ಬಂದಿದ್ದಾರೆ. ಈಗ ಮುಂದೂಡ ತಕ್ಕಂಥದ್ದು ಸಮಂಜಸವಲ್ಲ. ಆದುದರಿಂದ ಸದನವನ್ನು ನಡೆಸಿಕೊಂಡು ಹೋಗುವುದಕ್ಕೆ ತಾವು ಅನುಮತಿ ನೀಡಬೇಕು.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ:-(ಕಾರ್ಮಿಕ ಸಚಿವರು) ಸನ್ಮಾನ್ಯ ಅಧ್ಯಕ್ಷರೇ, ಜನತಾ ದಳದವರು ಪ್ರೊಟೆಸ್ಟ್ ಮಾಡಿ ಹೊರಗೆ ಹೋಗಿದ್ದಾರೆ, ದಯವಿಟ್ಟು ಅವರು ಬಂದ ಕೂಡಲೇ ಈ ಒಂದು ಸದನವನ್ನು ಮುಂದುವರಸ ಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ. ಕೆಲವು ಮಂತ್ರಿಗಳಿಗೆ ಇವತ್ತು ಇಲ್ಲಿ ಕೊಶ್ಚನ್ ಪವರ್ ಇರಲಿಲ್ಲ.

ಕೌನ್ಸಿಲ್‌ನಲ್ಲಿ ಕೊಶ್ಚನ್ ಹವರ್ ಆದ್ದರಿಂದ ಕೆಲವು ಮಂತ್ರಿಗಳು ಅಲ್ಲಿದ್ದಾರೆ. ಆದ ಕಾರಣ ಅವರು ಇಲ್ಲಿಗೆ ಬರಲು ಸಾಧ್ಯವಾಗಲಿಲ್ಲ. ಈಗ ಇಲ್ಲಿ ಮೈನರ್ ಇರಿಗೇಷನ್ ಖಾತೆಯ ಸಚಿವರು ಇದ್ದಾರೆ. ಅವರ ಕಾಲಿಂಗ್ ಅಟೆನ್‌ಷನ್ ಅಜಂಡಾದಲ್ಲಿ ಫರ್ಸ್ಟ್ ಇದೆ. ಆದುದರಿಂದ ಅದನ್ನು ತಾವು ತೆಗೆದು ಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾವೂ ಹೊರಗೆ ಹೋಗಬೇಕು ಎಂಬ ಅಭಿಪ್ರಾಯ ತಮಗಿದ್ದರೆ ಆಗಬಹುದು. ಇವೊತ್ತು ಮುಖ್ಯಮಂತ್ರಿಗಳಿಗೆ, ಉಪಮುಖ್ಯಮಂತ್ರಿಗಳಿಗೆ ಹಾಗೂ ಹಿರಿಯ ಕ್ಯಾಬಿನೆಟ್ ಸಚಿವರುಗಳಿಗೆ ವಿಶೇಷವಾದಂಥ ಒಂದು ಕಾರ್ಯಕ್ರಮ ಏನಾದರೂ ಇದೆಯೇ? ಸಿ.ಎಲ್.ಪಿ. ಮೀಟಿಂಗ್ ನಡೆದಿದೆಯೇ ಅಥವಾ ಇನ್ನು ಯಾವ ಕಾರಣ ಇದೆ? ಒಂದು ವೇಳೆ ಇದ್ದಲ್ಲಿ ಹಾಗೂ ವಿಧಾನ ಸೌಧದಲ್ಲಿ ಎಲ್ಲಾ ಸಚಿವರುಗಳು ಇರತಕ್ಕಂಥ ವಿಶೇಷ ಸಂದರ್ಭ ಇದ್ದರೆ ನಾವು ಒಪ್ಪಿಕೊಳ್ಳುತ್ತೇವೆ. ಈ ಸದನದಲ್ಲಿ ಆಡಳಿತ ಪಕ್ಷದವರು ಮೇಲ್ಪಂಕ್ತಿಯನ್ನು ಹಾಕಿಕೊಡಬೇಕಾಗಿದೆ; ಮುಖ್ಯ ಮಂತ್ರಿಗಳು ಮೇಲ್ಪಂಕ್ತಿಯನ್ನು ಹಾಕಿಕೊಡಬೇಕಾಗಿದೆ. ಅವರು ಸಮಯಕ್ಕೆ ಸರಿಯಾಗಿ ಬರದಿದ್ದರೆ ಅದು ಸರಿಯೇ? ಇಲ್ಲಿ ಹೇಗೋ ಕಾರ್ಯಕಲಾಪಗಳು ನಡೆಯುತ್ತವೆ ಎಂದು ಹೇಳಿದರೆ ಆ ವಿಷಯ ಬೇರೆ. ಇಲ್ಲಿ ಕೋರಂ ಇಲ್ಲದೆ ಕಾರ್ಯಕಲಾಪಗಳನ್ನು ನಡೆಯಲು ನಾವು ಸಹಕಾರ ಕೊಟ್ಟಿದ್ದೇವೆ. ಆದ್ದರಿಂದ ಆಡಳಿತ ಪಕ್ಷದ ಸದಸ್ಯರುಗಳು ಇವೊತ್ತು ಮುಖ್ಯ ಮಂತ್ರಿಗಳು ಇಲ್ಲದ, ಕ್ಯಾಬಿನೆಟ್ ಸಚಿವರುಗಳು ಇಲ್ಲದೆ ಕಾರ್ಯಕಲಾಪಗಳು ನಡೆಯಲಿ ಎಂದು ಹೇಳುವುದಾದರೆ ಅದಕ್ಕೆ ತಾವು ಅಪ್ಪಣೆ ಕೊಡುವುದಾದರೆ ನಾವು ಬಹಳ ಪ್ರಮುಖವಾದ ವಿಷಯಗಳಿರುವುದರಿಂದ ಭಾಗವಹಿಸುತ್ತೇವೆ. ಆದರೆ ಇದು ಸರಿಯಲ್ಲ; ಅನೇಕ ಭಾರಿ ತಾವು ಹೇಳಿದ್ದೀರಿ. ಶ್ರೀ ರಾಮಯ್ಯನವರು ಹೇಳಿದ ಹಾಗೆ ಅವರುಗಳು ಭಾಗವಹಿಸದೆ ಇರುವಂಥ ವಿಶೇಷ ಸಂದರ್ಭ ಏನು? ಸದನ ನಡೆಯುವಾಗ ಮೊದಲನೆ ಆದ್ಯತೆ ಸದನದ ಕಾರ್ಯ ಕಲಾಪಗಳಿಗೆ ಕೊಡ ಬೇಕಾಗಿದೆ. ಜನಪ್ರತಿನಿಧಿಗಳಾದ ನಾವು ಈ ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸುವುದಕ್ಕೆ ಗಮನ ಕೊಡುವಂಥ ಪ್ರಯತ್ನ ಮಾಡಬೇಕಾಗಿದೆ. ಆದ್ದರಿಂದ ತಾವು ಒಪ್ಪುವುದಾದರೆ ಆ ಕಡೆಯವರೂ ಒಪ್ಪುವುದಾದರೆ ಮುಂದೆ ಈ ರೀತಿ ಆಗಬಾರದು ಎಂಬ ಉದ್ದೇಶದಿಂದ ಅರ್ಧ ಗಂಟೆ ಸಭೆಯನ್ನು ಮುಂದೂಡಿ ಎಂದು ಕೇಳಿಕೊಳ್ಳುತ್ತೇನೆ. ಇಲ್ಲಿ ಯಾರೂ ಇಲ್ಲದೆ ಈ ಸದನದ ಕಾರ್ಯಕಲಾಪಗಳು ಹೀಗೆಯೇ ಮುಂದುರಿಯಬೇಕೆಂದು ಎಂದು ತಾವು ಹೇಳುವುದಾದರೆ ನನ್ನ ಅಭ್ಯಂತರ ಇಲ್ಲ. ನಾವು ಭಾಗವಹಿಸುತ್ತೇವೆ.

ಶ್ರೀ ಬಿ.ಎಂ. ಇದಿನಬ್ಬ:- 100 ದಿವಸ ಸದನ ನಡೆಯಬೇಕು ಎಂದು ಹೇಳುತ್ತೀರಿ, ಈಗ ಮುಂದೂಡಬೇಕು ಎಂದು ಹೇಳಿರುತ್ತೀರಿ, ಏನು ಇದು?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ:- ನಮ್ಮ ಅಜಂಡಾ ಪ್ರಕಾರ ಮೊದಲನೆ ಐಟಮ್ ಕಾಲಿಂಗ್ ಅಟೆನ್‌ಷನ್ ಅದನ್ನು ತೆಗೆದುಕೊಳ್ಳೋಣ.

ಶ್ರೀ ಬಿ. ಎಸ್. ಯಡಿಯೂರಪ್ಪ:- ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ. ಅದನ್ನು ತೆಗೆದುಕೊಳ್ಳಬೇಕು.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ:- ಬೇರೆ ಮಂತ್ರಿಗಳು ಕೌನ್ಸಿಲ್ಲಿನಿಂದ ಬರುತ್ತಾರೆ. ದಯವಿಟ್ಟು ಅಜಂಡಾ ಪ್ರಕಾರ ಹೋದರೆ ಎಲ್ಲಾ ಸರಿಹೋಗುತ್ತದೆ, ಇವೊತ್ತಿನ ಪರಿಸ್ಥಿತಿ ಇನ್ನು ಮುಂದೆ ಆಗದ ರೀತಿಯಲ್ಲಿ ನಾವು ನೋಡಿಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್:- ಮಂತ್ರಿಗಳು ಬರುವವರೆಗೆ ನಾವು ಅರಳಿ ಮರದ ಕೆಳಗೆ ಹೋಗಿ ಕುಳಿತು ಕೊಳ್ಳಬೇಕೆ? ಅವರು ಬರುತ್ತಾರೆ ನೀವು ಕುಳಿತುಕೊಳ್ಳಿ ಎಂದರೆ ಏನು ಅರ್ಥ? ಹಳ್ಳಿಯಲ್ಲಿ ಖಾಜಿ ನ್ಯಾಯ ಮಾಡಿದ ಹಾಗೆ ಅರಳಿ ಕಟ್ಟೆಯಲ್ಲಿ ಕುಳಿತುಕೊಂಡು ಗೌಡರು ಪಟೇಲರು ಬರಲಿ. ಆಮೇಲೆ ನ್ಯಾಯ ಮಾಡೋಣ ಎನ್ನುವ ರೀತಿಯಲ್ಲಿ ಅದರೆ ಏನು ಸ್ವಾಮಿ ಇದು? ಈ ಸದನಕ್ಕೆ ಕೊಡತಕ್ಕ ಗೌರವವೇ ಇದು?

ಅಧ್ಯಕ್ಷರು:- ಮಂತ್ರಿಗಳು ಇನ್ನು ಮುಂದೆ ಈ ರೀತಿ ಆಗದ ಹಾಗೆ ಕಾಳಜಿ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ. ಆದುದರಿಂದ ಇದನ್ನು ಇಷ್ಟಕ್ಕೆ ಮುಗಿಸಿ ಈಗ ಮೊದಲನೆಯ ವಿಷಯವಾದ ಸಂತಾಪ ಸೂಚಕ ನಿರ್ಣಯವನ್ನು ತೆಗೆದುಕೊಳ್ಳೋಣ.